ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 33- 39
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಎರಡು ವರ್ಷದ ಬಿ.ಇಡಿ. ಪದವಿಯಲ್ಲಿರುವ ನಿಕಟಸೇವಾ ಪೂರ್ವ ತರಬೇತಿ: ಒಂದು ಅವಲೋಕನ

**ಡಾ.ಸತೀಶ ಎ. ಹಿರೇಮಠ***

*ಪ್ರಾಂಶುಪಾಲರು, ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ.

***Abstract:***

*ಭಾರತದಲ್ಲಿ ಪ್ರಸ್ತುತ ಶಿಕ್ಷಣ ಕ್ಷೇತ್ರವು ಆಮೂಲಾಗ್ರ ಬದಲಾವಣೆಗಳೊಂದಿಗೆ ಸನ್ನಿವೇಶಕ್ಕನುಗುಣವಾಗಿ ನಾವಿನ್ಯತೆಯೊಂದಿಗೆ ಸಾಗಿದೆ. ವಿಶೇಷವಾಗಿ ಶಿಕ್ಷಕರ ಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದಾಗಿದೆ. ಪ್ರಾರಂಭದಲ್ಲಿ ಒಂಭತ್ತು ತಿಂಗಳಿಗೆ ಸೀಮಿತವಾಗಿದ್ದ ಬಿ.ಇಡಿ. ಅಧ್ಯಯನವು 2014 ರಿಂದ ಎರಡು ವರ್ಷಕ್ಕೆ ವಿಸ್ತರಿಲ್ಪಟ್ಟಿದೆ. ಆಧುನಿಕ ಸಮಾಜಕ್ಕೆ ಪೂರಕವಾಗುವ ಕೌಶಲಭರಿತ ಪ್ರಬುದ್ಧ ಶಿಕ್ಷಕರನ್ನು ಸಿದ್ಧಪಡಿಸುವ ಸದಾಶಯದೊಂದಿಗೆ ಎರಡು ವರ್ಷದ ಬಿ.ಇಡಿ. ಕೋರ್ಸ್ ತನ್ನ ಮಹತ್ವವನ್ನು ಹೆಚ್ಚಿಸಿಕೊಂಡಿದೆ. ಪದವಿ ಹಂತದಲ್ಲಿ ಸೈದ್ಧಾಂತಿಕ ವಿಷಯಗಳಲ್ಲಿ ಮಾತ್ರ ಹಿಡಿತ ಸಾಧಿಸಿ ಶಿಕ್ಷಕರಾಗಬಯಸಿ ಬಿ.ಇಡಿ. ಅಧ್ಯಯನ ಮಾಡುವ ಪ್ರಶಿಕ್ಷಣಾರ್ಥಿಗಳಿಗೆ ಬೋಧನಾ ವಿಷಯಗಳ ಜೊತೆಗೆ, ಸೂತ್ರಗಳು, ಕೌಶಲಗಳು ಮತ್ತು ವಿಧಾನಗಳಲ್ಲಿ ತರಬೇತಿ ನೀಡುವುದರ ಜೊತೆಗೆ ಸಧೃಡವಾದ ವ್ಯಕ್ತಿತ್ವ, ಮನೋವೈಜ್ಞಾನಿಕ ಪರಿಕಲ್ಪನೆ, ಆಡಳಿತಾತ್ಮಕ ಅನುಭವ, ಶಿಕ್ಷಣದ ಮೂಲ ಪರಿಕಲ್ಪನೆಗಳನ್ನು ಪ್ರಶಿಕ್ಷಣಾರ್ಥಿಗಳಲ್ಲಿ ಬೆಳಸುವ ಕಾರ್ಯವನ್ನು ಪ್ರಸ್ತುತ ಬಿ.ಇಡಿ ಅಧ್ಯಯನದಲ್ಲಿ ಅಳವಡಿಸಲಾಗಿದೆ.*

**Keywords:** *ಬಿ.ಇಡಿ, ಶಿಕ್ಷಣ, ಪ್ರಶಿಕ್ಷಣ, ಪ್ರಶಿಕ್ಷಣಾರ್ಥಿ, ಬೋಧನೆ, ಕೌಶಲ.*

## ಪೀಠಿಕೆ

ಪ್ರಶಿಕ್ಷಣಾರ್ಥಿಗಳನ್ನು ಅರ್ಹ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ದೀರ್ಘಾವಧಿಯವರೆಗೆ ಇರಿಸುವ ಪರಿಕಲ್ಪನೆಯೇ ಈ ನಿಕಟ ಸೇವಾಪೂರ್ವ ತರಬೇತಿಯಾಗಿದೆ. ಪ್ರಶಿಕ್ಷಣಾರ್ಥಿಗಳಲ್ಲಿ ಬೋಧನಾ ಕೌಶಲಗಳನ್ನು ಅಳವಡಿಸುವ, ಪಾಠಗಳನ್ನು ವಿವೇಚನೆಯಿಂದ ಯೋಜಿಸುವ ಮತ್ತು ನಿರೂಪಿಸುವ, ಸಿದ್ಧಾಂತ ಹಾಗೂ ಅಭ್ಯಾಸವನ್ನು ಸಂಯೋಜಿಸುವ, ಸಹಪಾಠಿಗಳ ಬೋಧನಾ ಶೈಲಿಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ, ಮೇಲ್ವಿಚಾರಕರು ನೀಡಿದ ಪ್ರತಿಕ್ರಿಯೆಯ ಬೆಳಕಿನಲ್ಲಿ ಅವುಗಳನ್ನು ಸುಧಾರಿಸುವ, ನೀಡಿದ ಪಾಠಗಳ ಕುರಿತು ಪ್ರತಿಫಲನಾತ್ಮಕ ಅವಲೋಕನದ ಮೂಲಕ ಸ್ವ-ವಿಮರ್ಶೆ ಮಾಡಿಕೊಳ್ಳುವ ಸದಾವಕಾಶವನ್ನು ಒದಗಿಸಿದ ಪರಿಕಲ್ಪನೆಯೇ ನಿಕಟಸೇವಾ ಪೂರ್ವ ತರಬೇತಿಯಾಗಿದೆ. ಒಟ್ಟಿನಲ್ಲಿ ಹೇಳಬೇಕಂದರೆ ಶಿಕ್ಷಣ ಕ್ಷೇತ್ರದಲ್ಲಿ ನಿಜವಾದ ವೃತ್ತಿಪರರಾಗಿ ಪ್ರಶಿಕ್ಷಣಾರ್ಥಿಗಳ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುವಲ್ಲಿ ಪರಿಣಾಮಕಾರಿ ಮತ್ತು ಸುಧಾರಿತ ನಿಕಟ ಸೇವಾ ಪೂರ್ವ ತರಬೇತಿಯ ಅವಶ್ಯಕತೆ ಇಂದಿನ ಅತ್ಯಂತ ಆದ್ಯತ ಕಾರ್ಯವಾಗಿದೆ.

***Please cite this article as:*** *ಸತೀಶ್ ಎ. ಹಿರೇಮಠ್.* (2022). ಎರಡು ವರ್ಷದ ಬಿ.ಇಡಿ. ಪದವಿಯಲ್ಲಿರುವ ನಿಕಟಸೇವಾ ಪೂರ್ವ ತರಬೇತಿ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 1(4), 33–39.

ಬೊಧನೆಯು ಒಂದು ಕಲೆಯಾಗಿದ್ದು ಇದು ಆರ್ಜಿತವೂ ಹೌದು ಹಾಗೂ ಗಳಿಸಿದ್ದು ಹೌದು, ಅಂದರೆ ಆನುವಂಶಿಯ ಗುಣಗಳು ಕೂಡ ಉತ್ತಮ ಬೋಧನೆಗೆ ಒಂದು ಮೂಲವಾದರೆ, ಅನುಭವಗಳ ಮೂಲಕ ಅಂದರೆ ನಿರಂತರ ಕಲಿಕೆಯ ಮೂಲಕ ಕೌಶಲಗಳು/ವಿಧಾನಗಳ ವ್ಯವಸ್ಥಿತ ಅಳವಡಿಕೆಯ ಮೂಲಕ ಬೋಧನೆಯ ಗುಣಮಟ್ಟವನ್ನು ಉನ್ನತೀಕರಿಸಬಹುದಾಗಿದೆ. ಆದ್ದರಿಂದ ಬೋಧನೆಯನ್ನು ಅರ್ಜಿತಾನುಭವಗಳ ಸಮ್ಮಿಳನ ಕೌಶಲ ವಿಧಾನಗಳ ಸಮ್ಮಿಶ್ರಣ ಎಂದರೆ ತಪ್ಪಾಗಲಾರದು. ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಕಲಿಕೆಯನ್ನುಂಟು ಮಾಡಲು 'ಬೋಧಕನು ಸೈದ್ಧಾಂತಿಕ ವಿಷಯದಲ್ಲಿ ಮಾತ್ರವಲ್ಲದೆ ಬೋಧನಾ ಕೌಶಲಗಳ/ವಿಧಾನಗಳ ಮೇಲೆ ಹಿಡಿತ ಸಾಧಿಸಿರಬೇಕು. ಇದು ಬೋಧನಾ ವೃತ್ತಿಯ ಪರಿಪೂರ್ಣ ತರಬೇತಿ ಪಡೆದ ಪ್ರಶಿಕ್ಷಣಾರ್ಥಿಯಿಂದ ಮಾತ್ರ ಸಾಧ್ಯ. ಇದನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಲು ಭಾರತದಾದ್ಯಂತ ಶಿಕ್ಷಕರ ತರಬೇತಿ ಸಂಸ್ಥೆಗಳು ಅನೇಕ ನೂತನ ಪದ್ಧತಿ/ವಿಧಾನಗಳನ್ನು ಅಳವಡಿಸಿಕೊಂಡು ಈ ದಿಸೆಯಲ್ಲಿ ಪರಿಣಾಮಕಾರಿ ತರಬೇತಿ ನೀಡುವಲ್ಲಿ ಪರಿಶ್ರಮಿಸುತ್ತಿದೆ.

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (NCTE) ರಾಷ್ಟ್ರದಾದ್ಯಂತ 2014 ರಿಂದ ಬಿ.ಇಡಿ. ಅಧ್ಯಯನ ಅವಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಿದೆ. ಅಲ್ಲದೆ ಈ ಎರಡು ವರ್ಷದ ಅವಧಿಯಲ್ಲಿ ಆರು ತಿಂಗಳ ನಿಕಟ ಸೇವಾ ಪೂರ್ವ ತರಬೇತಿಯನ್ನು ಪರಿಚಯಿಸಿದೆ. ಈ ಮೂಲಕ ಪ್ರಶಿಕ್ಷಣಾರ್ಥಿಗಳಲ್ಲಿ ಪಾಠ ಟಿಪ್ಪಣೆಗಳನ್ನು ಬರೆಯುವ ಹಾಗೂ ವಿಮರ್ಶಿಸುವ, ಸಮಂಜಸನಾದ ಕೌಶಲ ಹಾಗೂ ವಿಧಾನಗಳನ್ನು ಅಳವಡಿಸಿಕೊಳ್ಳುವ, ಸ್ನೇಹಿತರ ಪಾಠಗಳನ್ನು ಅವಲೋಕಿಸಿ ವಿಶ್ಲೇಷಿಸುವ, ತಮ್ಮ ಪಾಠಗಳನ್ನು ಪ್ರತಿಫಲನ ಟಿಪ್ಪಣಿ ಮೂಲಕ ಸ್ವವಿಮರ್ಶಿಸುವ, ಸಮುದಾಯದೊಂದಿಗೆ ಸಂಪರ್ಕ ಸಾಧಿಸುವ ಪಠ್ಯಪೂರಕ ಚಟುವಟಿಕೆಗಳ ಆಯೋಜನೆಯ ಮೂಲಕ, ಮಗುವಿನ ಮೂರು ವಲಯಗಳಾದ ಜ್ಞಾನಾತ್ಮಕ, ಭಾವನಾತ್ಮಕ ಹಾಗೂ ಮನೋಕ್ರಿಯಾಜನ್ಯವಲಯಗಳ ವಿಕಾಸಗೊಳಿಸುವಂತಹ ವೈವಿಧ್ಯಮಯ ಸಾಮರ್ಥ್ಯಗಳನ್ನು ಪ್ರಶಿಕ್ಷಣಾರ್ಥಿಗಳಲ್ಲಿ ಬೆಳೆಸುವ ಸಮಗ್ರ ದೃಷ್ಟಿಕೋನವನ್ನು ನಿಕಟ ಸೇವಾಪೂರ್ವ ತರಬೇತಿಯು ಹೊಂದಿರುತ್ತದೆ. ಈ ನಿಕಟಸೇವಾ ಪೂರ್ವ ತರಬೇತಿಯ ಯಶಸ್ಸು ಶಿಕ್ಷಕರ ತರಬೇತಿ ಸಂಸ್ಥೆಗಳು, ನಿಯೋಜನೆಗೊಂಡ ಶಾಲೆಯ ಮುಖ್ಯಸ್ಥರು, ಮಾರ್ಗದರ್ಶಿ ಶಿಕ್ಷಕರು ಹಾಗೂ ಸಂಯೋಜಿತ ವಿಶ್ವವಿದ್ಯಾಲಯಗಳು ಒಂದಕ್ಕೊಂದು ಪೂರಕವಾಗಿ ಶ್ರಮಿಸಿದಾಗ ಮಾತ್ರ ಸಾಧ್ಯ.

**ಅಧ್ಯಯನದ ಹಿನ್ನೆಲೆ ಹಾಗೂ ಅಗತ್ಯತೆ:**

ನಿಕಟ ಸೇವಾ ಪೂರ್ವ ತರಬೇತಿ ಪರಿಕಲ್ಪನೆಯು 1900 ರ ದಶಕದ ಆರಂಭದಲ್ಲಿ ಅಮೇರಿಕಾ ದೇಶದಲ್ಲಿ ಹುಟ್ಟಿಕೊಂಡಿದೆ (ಡ್ರಿಸ್ಕಾಲ್, 2006). ನಿಕಟ ಸೇವಾ ಪೂರ್ವ ತರಬೇತಿಯ ಇತಿಹಾಸವು, ಪ್ರಾಯೋಗಿಕ ಕಲಿಕೆ ಮತ್ತು ಪ್ರಾಯೋಗಿಕ ಶಿಕ್ಷಣ, ಶಾಲಾವ್ಯಾಪ್ತಿಗೊಳಪಟ್ಟ ಕಾರ್ಯಕ್ರಮಗಳು ಮತ್ತು ಉಪಕ್ರಮಗಳು, ದತ್ತಿ ವೃತ್ತಿ ಅನ್ವೇಷಣೆ ಮುಂತಾದ ಕಾರ್ಯಕ್ರಮಗಳು ನಿಕಟ ಸೇವಾ ಪೂರ್ವ ತರಬೇತಿಯೊಂದಿಗೆ ಹೆಣೆದುಕೊಂಡಿದೆ.

ಎರಡು ವರ್ಷದ ಬಿ.ಇಡಿ ಪಠ್ಯಕ್ರಮದಲ್ಲಿ ಅಳವಡಿಸಲ್ಪಟ್ಟ ನಿಕಟ ಸೇವಾ ಪೂರ್ವ ತರಬೇತಿಯ ಕುರಿತು ಅನೇಕ ಸಂಶೋಧಕರು ಅಧ್ಯಯನ ನಡೆಸಿದ್ದು, ಅವುಗಳಲ್ಲಿ ವಾಲಿಯಾ (1992), ಮಿಶ್ರಾ (1992), ಡಾನಾ (1998), ಬೇಗ್ಸ ರಾಸ್ ಮತ್ತು ಗುಡವಿನ್(2008) ಪ್ರಮುಖವಾದವುಗಳಾಗಿವೆ.

ಇವರ ಸಂಶೋಧನಾ ಅಧ್ಯಯನಗಳಲ್ಲಿ ಪ್ರಶಿಕ್ಷಣಾರ್ಥಿಗಳು ತಮ್ಮ ಬೋಧನಾ ಕೌಶಲಗಳನ್ನು ಪರಿಷ್ಕರಿಸಲು ಹಾಗೂ ಬೋಧನಾ ಗುಣಮಟ್ಟವನ್ನು ಕಾಪಾಡಲು ನಿಕಟ ಸೇವಾ ಪೂರ್ವ ತರಬೇತಿಯು ಉಪಯುಕ್ತವಾಗಿದೆ ಎಂದು ಹೇಳಿದ್ದಾರೆ. ಆದರೆ ಬಹುತೇಕ ಸಂಶೋಧಕರು ನಿಕಟ ಸೇವಾ ಪೂರ್ವ ತರಬೇತಿಯಲ್ಲಿ ಪರಿಣಾಮಕಾರಿ ಅಧ್ಯಯನ ಆಗದಿರುವ ಕೊರತೆಯನ್ನು ಕಂಡುಕೊಡಿದ್ದಾರೆ.

ಭಾರತದಲ್ಲಿ ಸ್ವಾತಂತ್ರ್ಯ ನಂತರ ದೇಶವು ಶಿಕ್ಷಕರ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ, 1964–66 ರಲ್ಲಿ ಶಿಕ್ಷಣ ಆಯೋಗವು ವೃತ್ತಿಪರವಾದ ಶಿಕ್ಷಕರ ಶಿಕ್ಷಣ, ನಿಕಟ ಸೇವಾ ಪೂರ್ವ ತರಬೇತಿಯುಕ್ತ ಸಮಗ್ರ ಕಾಲೇಜುಗಳನ್ನು ತೆರೆಯಲು ಶಿಫಾರಸ್ಸು ಮಾಡಿತು. ರಾಷ್ಟ್ರೀಯ ಶಿಕ್ಷಣ ನೀತಿಯು–1986 ಕೇಂದ್ರ ಸರಕಾರದ ಪ್ರಾಯೋಜಿತ ಶಿಕ್ಷಕರ ಶಿಕ್ಷಣವನ್ನು ಶಿಫಾರಸ್ಸು ಮಾಡಿದೆ. ಇದರ ಸಲಹೆ ಮತ್ತು ಶಿಫಾರಸ್ಸುಗಳ ಆಧಾರದ ಮೇಲೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು, ಶಿಕ್ಷಣದಲ್ಲಿ ಉನ್ನತ ಅಧ್ಯಯನ ಸಂಸ್ಥೆ ಮತ್ತು ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.

ಮುಂದುವರೆದು ಸರ್ವೋಚ್ಚ ನಾಯಾಲಯದ ನ್ಯಾಯಮೂರ್ತಿ ಜಸ್ಟಿಸ್ ವರ್ಮಾ ಸಮಿತಿಯು ಶಿಕ್ಷಕರ ಶಿಕ್ಷಣ ಸುಧಾರಣೆಗೆ ಆಗಸ್ಟ್ 2012ರ ವರದಿಯಲ್ಲಿ ಕೆಲವು ಪ್ರಮುಖ ಶಿಫಾರಸ್ಸುಗಳನ್ನು ನೀಡಿದೆ. ಈ ಸಮಿತಿಯು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ಮತ್ತು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು– 2009ಕ್ಕೆ ಅನುಗುಣವಾಗಿ ಶಿಕ್ಷಕರ ಶಿಕ್ಷಣದ ವೃತ್ತಿಪರತೆಗಾಗಿ ಎರಡು ವರ್ಷಗಳ ಪೂರ್ವ ಸೇವಾ ಶಿಕ್ಷಣ (ಬಿ.ಇಡಿ) ತರಬೇತಿಯ ಬೇಡಿಕೆಯನ್ನಿಟ್ಟಿತು. ಭಾರತದ ಗೆಜೆಟ್ 2014ರಲ್ಲಿ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (NCTE) ಬಿ.ಇಡಿ. ಕಲಿಕಾವಧಿಗೆ ಸಂಬಂಧಿಸಿದಂತೆ ಸಮಗ್ರ ಬದಲಾವಣೆಗಳನ್ನು ತಂದು ಎರಡು ವರ್ಷದ ಬಿ.ಇಡಿ. ಪದವಿಯಲ್ಲಿ 20 ವಾರಗಳ ನಿಕಟ ಸೇವಾ ಪೂರ್ವ ತರಬೇತಿಯನ್ನು ಅಳವಡಿಸಿದೆ.

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯ ಮಾರ್ಗಸೂಚಿಗಳನ್ವಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು 1999 ರಿಂದಲೆ ಎರಡು ವರ್ಷದ ಬಿ.ಇಡಿ ಶಿಕ್ಷಣವನ್ನು ರಾಷ್ಟ್ರದ ನಾಲ್ಕು ಭಾಗಗಳಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾರಂಭಿಸಿತು. ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು ಪ್ರಾರಂಭಿಸಿದ, ಎರಡು ವರ್ಷ ಅವಧಿಯ ಬಿ.ಇಡಿ ಪದವಿಯು ಕೆಲವು ವಿಶೇಷ ಗುಣಲಕ್ಷಣಗಳನ್ನು ಹೊಂದಿದೆ, ಇದು ಪ್ರಶಿಕ್ಷಣಾರ್ಥಿಗಳಲ್ಲಿ ಬೋಧನಾ ಕಲೆಯನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಅಣುಕೌಶಲಗಳ ಕರಗತ, ಅನುಕಲನ, ಬೋಧನಾ ಸೂತ್ರಗಳ ಅಳವಡಿಕೆ ಇತ್ಯಾದಿ ಸಾಮರ್ಥ್ಯಗಳನ್ನು ಎರಡು ವರ್ಷದ ಬಿ.ಇಡಿ ಪದವಿಯನ್ನು ನಡೆಸಲಾಗುತ್ತಿದೆ. ಪ್ರಾದೇಶಿಕ ಶಿಕ್ಷಣ ಕೇಂದ್ರಗಳನ್ನು ಶಿಕ್ಷಕರ ಶಿಕ್ಷಣದ ನೂತನ ವಿಧಾನಗಳ ಪ್ರಯೋಗಾಲಯ ಎಂದು ಪರಿಗಣಿಸಲಾಗಿದೆ. ಈ ಸಂಸ್ಥೆಗಳಲ್ಲಿನ ಯಶಸ್ಸಿನ ನಂತರ 2015–16ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರದಾದ್ಯಂತ ಒಂದು ವರ್ಷದ ಬಿ.ಈಡಿ ಪದವಿಯ ಅವಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಿತು.

**ಕೋಷ್ಟಕ 1: ಶಾಲಾ ನಿಕಟಸೇವಾ ಪೂರ್ವ ತರಬೇತಿಯ ಬದಲಾದ ಸನ್ನಿವೇಶದ ವಿವರ**

| ಕಾರ್ಯಕ್ರಮಗಳ ವಿವರ | ಪ್ರಥಮ ವರ್ಷ | ದ್ವಿತೀಯ ವರ್ಷ | ಒಟ್ಟು |
|---|---|---|---|
| ತರಬೇತಿ ಅವಧಿ | **2 ವಾರ (2ನೇ ಚಾತುರ್ಮಾಸ)** | **18ವಾರ (3ನೇ ಚಾತುರ್ಮಾಸ)** | **20 ವಾರಗಳು** |
| ಸಂಪೂರ್ಣ ಕಾರ್ಯಕ್ರಮ | 40 | 40 | 80 |
| ಕ್ರೆಡಿಟ್ಸ್ | 4 | 16 (14+2) | 20 |
| ಒಟ್ಟು ಅಂಕಗಳು (ಬಿ.ಇಡಿ ಕೋರ್ಸ್) | 1000 | 1000 | 2000 |
| ನಿಕಟ ಸೇವಾಪೂರ್ವ ತರಬೇತಿಗೆ ನೀಡಿದ ಅಂಕಗಳು | 100 | 400 | 500 |
| ಕ್ರೆಡಿಟ್‌ಗೆ ನೀಡಿದ ಮಹತ್ವ (ಪ್ರತಿ ಶತದಲ್ಲಿ) | 10% | 40% | 25% |
| ಅಂಕಗಳಿಗೆ ನೀಡಿದ ಮಹತ್ವ (ಪ್ರತಿ ಶತದಲ್ಲಿ) | 10% | 40% | 25% |

**ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯ ಪಾತ್ರ ಮತ್ತು ಜವಾಬ್ದಾರಿ**

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯ ಪ್ರಕಾರ, ಭವಿಷ್ಯದ ಶಿಕ್ಷಕರನ್ನು ತಯಾರಿಸುವ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಶಿಕ್ಷಣ ವಿಭಾಗಗಳು, ಸಂಯೋಜಿತ ಕೇಂದ್ರಗಳು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು ಹಾಗೂ ಪ್ರಾಯೋಗಿಕ ಶಾಲೆಗಳು ಪೂರಕವಾಗಿ ಕಾರ್ಯನಿರ್ವಹಿಸಬೇಕು.

**ಶಿಕ್ಷಕರ ಶಿಕ್ಷಣದ ವಿವಿಧ ಸಂಸ್ಥೆಗಳ ಪಾತ್ರಗಳು ಹಾಗೂ ಜವಾಬ್ದಾರಿಗಳು**

1. ನಿಕಟ ಸೇವಾ ಪೂರ್ವ ತರಬೇತಿಯ ಕುರಿತು ನೀತಿ ನಿಯಮಗಳನ್ನು ರೂಪಿಸುವುದು.
2. ಪ್ರಶಿಕ್ಷಕರು, ಶಾಲಾ ಮುಖ್ಯಸ್ಥರು, ಮಾರ್ಗದರ್ಶಿ ಶಿಕ್ಷಕರು ಹಾಗೂ ಪ್ರಶಿಕ್ಷಣಾರ್ಥಿಗಳಿಗೆ ಮಾಹಿತಿಗಾಗಿ ನಿಕಟ ಸೇವಾ ಪೂರ್ವ ತರಬೇತಿಯ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು.
3. ಕೈಪಿಡಿಯಲ್ಲಿ ನಿಕಟ ಸೇವಾಪೂರ್ವ ತರಬೇತಿಯ ಕಾರ್ಯಗಳು ಹಾಗೂ ಮೌಲ್ಯಮಾಪನ ಚೌಕಟ್ಟನ್ನು ನಮೂದಿಸುವುದು.

**ರಾಜ್ಯ ಶಿಕ್ಷಣ ಇಲಾಖೆಯ ಪಾತ್ರಗಳು ಹಾಗೂ ಜವಾಬ್ದಾರಿಗಳು**

1. ರಾಜ್ಯದಲ್ಲಿರುವ ಶಿಕ್ಷಕರ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನು ನಿರ್ವಹಿಸುವುದು.
2. 50 ವಿದ್ಯಾರ್ಥಿಗಳಿಗೆ 5 ಪ್ರಾಯೋಗಿಕ ಶಾಲೆಗಳ ಅನುಪಾತದಲ್ಲಿ ಅಗತ್ಯತೆಯನ್ನು ರೂಪಿಸುವುದು.
3. ರಾಜ್ಯಕ್ಕೆ ಸೀಮಿತವಾಗುವಂತೆ ನಿಕಟ ಸೇವಾ ಪೂರ್ವ ತರಬೇತಿಯ ಕುರಿತು ನೀತಿಯನ್ನು ರೂಪಿಸುವುದು ಹಾಗೂ ಪ್ರಾಯೋಗಿಕ ಶಾಲೆಗಳು ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ಹೊರಡಿಸುವುದು.
4. ಪ್ರತಿ ಜಿಲ್ಲೆಗಳಿಂದ ಸ್ವೀಕರಿಸಿದ ಮೇಲ್ವಿಚಾರಣಾ ವರದಿಯನ್ನು ಕ್ರೂಢೀಕರಣ ಮಾಡಿ ಏಕೀಕೃತ ವರದಿಯನ್ನು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಗೆ ರವಾನಿಸುವುದು.

5. ಸಂಯೋಜಿತ ಸಂಸ್ಥೆಗಳನ್ನು ಸಂಪರ್ಕಿಸಿ ಜಿಲ್ಲಾ ಮಟ್ಟದಲ್ಲಿ ನಿಕಟ ಸೇವಾ ಪೂರ್ವ ತರಬೇತಿಯ ವೇಳಾಪಟ್ಟಿಯನ್ನು ತಯಾರಿಸುವುದು.
6. ಜಿಲ್ಲೆಯಲ್ಲಿರುವ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳಿಗೆ ಶಾಲೆಗಳನ್ನು ನಿಯೋಜಿಸುವುದು.
7. ನಿಕಟ ಸೇವಾ ಪೂರ್ವ ತರಬೇತಿಯ ಸಫಲತೆಗಾಗಿ ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ ರಾಜ್ಯ ಪ್ರಧಾನ ಕಛೇರಿಗೆ ವರದಿ ನೀಡುವುದು.

**ಸಂಯೋಜಿತ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿಗಳು**

1. ರಾಜ್ಯ ಶಿಕ್ಷಣ ಇಲಾಖೆಯೊಂದಿಗೆ ಸಮಲೋಚಿಸಿ ಶಾಲಾ ನಿಕಟ ಸೇವಾ ಪೂರ್ವ ತರಬೇತಿಯ ವೇಳಾಪಟ್ಟಿಯನ್ನು ತಯಾರಿಸುವುದು.
2. ನಿಕಟ ಸೇವಾ ಪೂರ್ವ ತರಬೇತಿಯ ಮೌಲ್ಯಮಾಪನಕ್ಕಾಗಿ ಮೌಲ್ಯಮಾಪನ ನಮೂನೆಯನ್ನು ಅಭಿವೃದ್ಧಿಪಡಿಸಿ, ಅಧಿಸೂಚನೆ ಹೊರಡಿಸಿ ಮಾಹಿತಿ ನೀಡುವುದು.
3. ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಹಾಗೂ ತರಬೇತಿ ಶಾಲೆಗಳು ನಿಕಟ ಸೇವಾ ಪೂರ್ವ ತರಬೇತಿ ಅವಧಿಯಲ್ಲಿ ಪ್ರಶಿಕ್ಷರ್ಣಾಥಿಗಳ ಕಾರ್ಯನಿರ್ವಹಣೆಗೆ ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಸೂಚಿಸುವುದು.
4. ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಹಾಗೂ ತರಬೇತಿ ಶಾಲೆಗಳೊಂದಿಗೆ ನಿಕಟ ಸೇವಾ ಪೂರ್ವ ತರಬೇತಿಯ ಕುರಿತು ನಿಯಮಿತವಾಗಿ ಮೇಲ್ವಿಚಾರಣೆ ಕೈಗೊಂಡು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಗೆ ಕ್ರೋಡೀಕೃತ ವರದಿ ನೀಡುವುದು.

**ಶಿಕ್ಷಕರ ಶಿಕ್ಷಣ ಸಂಸ್ಥೆಗಳ ಪಾತ್ರ ಹಾಗೂ ಜವಾಬ್ದಾರಿಗಳು**

1. ತರಬೇತಿ ಶಾಲೆಗಳಿಗೆ ನಿಕಟ ಸೇವಾ ಪೂರ್ವ ತರಬೇತಿಯ ಕೈಪಿಡಿಗಳನ್ನು ಒದಗಿಸುವುದು.
2. ಶಾಲಾ ಮುಖ್ಯಸ್ಥರು ಹಾಗೂ ಮಾರ್ಗದರ್ಶಿ ಶಿಕ್ಷಕರೊಂದಿಗೆ ಪೂರ್ವ ತಯಾರಿ ಸಮಾಲೋಚನಾ ಸಭೆಯನ್ನು ಆಯೋಜಿಸುವುದು.
3. ಮಾರ್ಗದರ್ಶಿ ಶಿಕ್ಷಕರೊಂದಿಗೆ ಸಮಾಲೋಚಿಸಿ ಹೆಚ್ಚುವರಿ ಚಟುವಟಿಕೆಗಳಿಗೆ ಪೂರಕ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು.
4. ಮಾರ್ಗದರ್ಶಿ ಶಿಕ್ಷಕರೊಂದಿಗೆ ಪಾಕ್ಷಿಕ ಪರಿಶೀಲನಾ ಸಭೆಗಳನ್ನು ನಡೆಸುವುದು.
5. ನಿಕಟ ಸೇವಾ ಪೂರ್ವ ತರಬೇತಿಯ ಅವಧಿಯ ಪ್ರತೀ ವಾರದ ಶನಿವಾರದಂದು ಪ್ರಶಿಕ್ಷಣಾರ್ಥಿಗಳೊಂದಿಗೆ ಅನುಸರಣಾ ಸಭೆಗಳನ್ನು ನಡೆಸುವುದು.
6. ಅಭ್ಯಾಸ ಬೋಧನೆಯ ವೀಕ್ಷಣೆ ಸೇರಿದಂತೆ ನಿಕಟ ಸೇವಾ ಪೂರ್ವ ತರಬೇತಿಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು.
7. ಶಾಲಾ ಮಾರ್ಗದರ್ಶಿ ಶಿಕ್ಷಕರ ಸಹಯೋಗದೊಂದಿಗೆ ಪ್ರಶಿಕ್ಷಣಾರ್ಥಿಗಳ ತರಬೇತಿಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು.

**ಪ್ರಾಯೋಗಿಕ ಶಾಲೆಗಳ ಪಾತ್ರ ಹಾಗೂ ಜವಾಬ್ದಾರಿಗಳು**

1. ಉತ್ತಮ ಶೈಕ್ಷಣಿಕ ಅರ್ಹತೆ ಹೊಂದಿದ ಹಾಗೂ ಪ್ರೇರಣಾತ್ಮಕ ಶಿಕ್ಷಕರನ್ನು ಮಾರ್ಗದರ್ಶಿ ಶಿಕ್ಷಕರೆಂದು ಗುರುತಿಸುವುದು.
2. ಶಿಕ್ಷಕರ ಶಿಕ್ಷಣ ಸಂಸ್ಥೆಗಳಲ್ಲಿ ಆಯೋಜಿಸುವ ಪರಿಚಯಾತ್ಮಕ ಸಭೆಗಳಿಗೆ ಮಾರ್ಗದರ್ಶಿ ಶಿಕ್ಷಕರನ್ನು ನಿಯೋಜಿಸುವುದು.
3. ಪ್ರಶಿಕ್ಷಣಾರ್ಥಿಗಳಿಗೆ ಗ್ರಂಥಾಲಯ, ಪ್ರಯೋಗಾಲಯ, ಆಟದ ಮೈದಾನಗಳು ಹಾಗೂ ಇತರ ಶಾಲಾ ಸೌಲಭ್ಯಗಳನ್ನು ಲಭ್ಯವಾಗುವಂತೆ ಕ್ರಮವಹಿಸುವುದು.
4. ಶಾಲಾ ಅಸೆಂಬ್ಲಿ, ಸಾಂಸ್ಕೃತಿಕ ಚಟುವಟಿಕೆಗಳು, ಪಾಲಕ ಶಿಕ್ಷಕರ ಸಭೆಗಳು, ಆಟೋಟಗಳು, ಅಂತರ್– ಮನೆ ಸ್ಪರ್ಧೆಗಳು ಮುಂತಾದ ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಹಾಗೂ ಕೊಡುಗೆ ನೀಡಲು ಪ್ರಶಿಕ್ಷಣಾರ್ಥಿಗಳಿಗೆ ಅನುಮತಿ ನೀಡುವುದು ಹಾಗೂ ಪ್ರಶಿಕ್ಷಣಾರ್ಥಿಗಳ ವಿಷಯ ಅಭ್ಯಾಸ ಬೋಧನೆಗೆ ಮಾರ್ಗದರ್ಶನ ನೀಡುವುದು.
5. ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಮೌಲ್ಯಮಾಪನದಲ್ಲಿ ಭಾಗವಹಿಸುವುದು.
6. ಪ್ರಶಿಕ್ಷಣಾರ್ಥಿಗಳ ಸಮಸ್ಯೆಗಳು ಮತ್ತು ತೊಂದರೆಗಳನ್ನು ತ್ವರಿತವಾಗಿ ಪರಿಹರಿಸುವುದು.

**ನಿಕಟ ಸೇವಾ ಪೂರ್ವ ತರಬೇತಿಯಲ್ಲಿ ಪ್ರಶಿಕ್ಷಣಾರ್ಥಿಗಳು ಪೂರೈಸಬೇಕಾದ ಕಾರ್ಯಗಳು**

ನಿಕಟ ಸೇವಾ ಪೂರ್ವ ತರಬೇತಿಯಲ್ಲಿ ಪ್ರಶಿಕ್ಷಣಾರ್ಥಿಗಳು ತರಗತಿ ಬೋಧನೆ, ತರಗತಿ ನಿರ್ವಹಣೆ, ಶಾಲಾ ಆಧಾರಿತ ಹಾಗೂ ಸಮುದಾಯ ಆಧಾರಿತ ಬೋಧನಾ ಚಟುಚಟಿಕೆಗಳ ಸಂಘಟನೆಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ. ಅಲ್ಲದೆ ಇವರನ್ನು ತಿಳುವಳಿಕೆ, ಸಾಮರ್ಥ್ಯ ಮತ್ತು ಕೌಶಲಗಳ ಸಂಗ್ರಹಕರನ್ನಾಗಿ ಬೆಳೆಸಬೇಕಾಗುವುದು. ಈ ಕೆಳಗಿನ ಚಟುವಟಿಕೆಗಳನ್ನು ಯಶ್ವಸಿಯಾಗಿ ಪೂರೈಸುವ ಮೂಲಕ ಪ್ರಶಿಕ್ಷಣಾರ್ಥಿ ಒಬ್ಬ ಅರ್ಹ ಶಿಕ್ಷಕನಾಗಲು ಸಾಧ್ಯವಿದೆ.

**ಪ್ರಶಿಕ್ಷಣಾರ್ಥಿ ಕೈಗೊಳ್ಳುವ ಚಟುಚಟಿಕೆಗಳು**

1. ತರಬೇತಿ ಶಾಲೆಯ ಸುತ್ತಲಿನ ಸಮುದಾಯವನ್ನು ಅರ್ಥ ಮಾಡಿಕೊಳ್ಳುವುದು.
2. ಶಾಲಾ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳ ವಿಶ್ಲೇಷಣೆ.
3. ನಿಯಮಿತ ಶಿಕ್ಷಕರ ತರಗತಿಯ ಬೋಧನೆಯನ್ನು ಅವಲೋಕಿಸುವುದು.
4. ಸಹಪಾಠಿ ಪ್ರಶಿಕ್ಷಣಾರ್ಥಿಗಳ ಬೋಧನೆಯನ್ನು ಅವಲೋಕಿಸುವುದು ಹಾಗೂ ವಿಮರ್ಶಿಸುವುದು.
5. ತರಬೇತಿ ಶಾಲೆ ಹಾಗೂ ಶಾಲೆ ಅಳವಡಿಸಿಕೊಂಡ ನವೀನ ಚಟುವಟಿಕೆಗಳ ಕುರಿತು ಅಧ್ಯಯನ ಕೈಗೊಳುವುದು.
6. ಪ್ರತಿ ಬೋಧನಾ ವಿಷಯದಲ್ಲಿ ಪಾಠಯೋಜನೆ ಹಾಗೂ ಘಟಕಯೋಜನೆ ತಯಾರಿಸುವುದು ಹಾಗೂ ಘಟಕ ಪರೀಕ್ಷೆಯನ್ನು ಆಯೋಜಿಸುವುದು.
7. ಎರಡೂ ಬೋಧನಾ ವಿಷಯಗಳಲ್ಲಿ ನಿಗದಿತ ಪಠ್ಯಕ್ರಮದ ಘಟಕಗಳನ್ನು ಬೋಧಿಸುವುದು.

8. ಬದಲಿ ಶಿಕ್ಷಕರಾಗಿ ಬೋಧಿಸುವುದು.
9. ಬೋಧನಾ ಕಲಿಕಾ ಸಂಪನ್ಮೂಲಗಳನ್ನು ತಯಾರಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು.
10. ಪ್ರಶ್ನೆ ಪತ್ರಿಕೆಗಳು ಹಾಗೂ ಇತರ ಮೌಲ್ಯಮಾಪನ ಸಾಧನಗಳನ್ನು ತಯಾರಿಸುವುದು.
11. ಚಿಕಿತ್ಸಾತ್ಮಕ ಪರೀಕ್ಷೆಗಳ ರಚನೆ ಹಾಗೂ ಪರಿಹಾರ ಬೋಧನೆಯನ್ನು ಸಂಘಟಿಸುವುದು.
12. ಮಗುವಿನ ಕುರಿತು ವ್ಯಕ್ತಿ ಅಧ್ಯಯನ ಕೈಗೊಳ್ಳುವುದು.
13. ಶಾಲಾ ಸನ್ನಿವೇಶದಲ್ಲಿ ಬರುವ ಯಾವುದಾದರೊಂದು ಸಮಸ್ಯಾತ್ಮಕ ಕ್ಷೇತ್ರದ ಮೇಲೆ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳುವುದು.
14. ಸಮುದಾಯದ ಕಾರ್ಯ ಹಾಗೂ ಸಮೀಕ್ಷೆಯನ್ನು ಕೈಗೊಳ್ಳುವುದು.
15. ದಿನನಿತ್ಯದ ಚಟುವಟಿಕೆಗಳು ಅದರ ಪ್ರತಿಫಲನಗಳನ್ನು ದಾಖಲಿಸಲು ದಿನವಹಿ ಹಾಗೂ ಪ್ರತಿಫಲನಾ ಡೈರಿ ನಿರ್ವಹಿಸುವುದು.
16. ವಿಶೇಷ ಶಾಲೆಗಳು, ಬಿ.ಆರ್.ಸಿಗಳು, ಡೈಟ್,ವಸತಿ ಶಾಲೆಗಳು ಇತ್ಯಾದಿಗಳಿಗೆ ಬೇಟಿ ನೀಡಿ ವರದಿ ಬರೆಯುವುದು.
17. ಅವಕಾಶ ಸಿಕ್ಕರೆ ಶಾಲೆಯ ಸರ್ವ ಜವಾಬ್ದಾರಿಗಳ ಅನುಭವ ಪಡೆಯುವುದು

**ತೀರ್ಮಾನ**

ವಿಸ್ತೃತ ಅವಧಿಗೆ ನಿಕಟ ಸೇವಾ ಪೂರ್ವ ತರಬೇತಿ ಅಯೋಜಿಸುವುದು ಸವಾಲಿನ ಕೆಲಸವಾಗಿದ್ದು ಸರಿಯಾದ ಪೂರ್ವ ತಯಾರಿ ಇಲ್ಲದೆ ಹೋದರೆ ನಿರ್ಧಾರಿತ ಗುರಿ ತಲುಪಲು ಸಾಧ್ಯವಿಲ್ಲ. ಪ್ರಬುದ್ಧ ಹಾಗೂ ಸಂಪನ್ಮೂಲಭರಿತ ಪರಿಣಾಮಕಾರಿ ಶಿಕ್ಷಕರನ್ನು ತಯಾರಿಸಲು ಬೇಕಾಗುವ ಗುರಿ ಉದ್ದೇಶಗಳು, ಬೋಧನ ಕೌಶಲಗಳ, ಬೋಧನ ವಿಧಾನಗಳ ಕುರಿತು ಪ್ರಶಿಕ್ಷಕರಿಂದ ಪ್ರಾತ್ಯಕ್ಷಿಕೆಯ ಮೂಲಕ ಪ್ರಶಿಕ್ಷಣಾರ್ಥಿಗಳನ್ನು ಬೋಧನೆಗೆ ಅಣಿಗೊಳಿಸುವುದಲ್ಲದೆ, ಪ್ರಶಿಕ್ಷಕರ ಪ್ರಾತ್ಯಕ್ಷಿಕೆಯ ನಂತರ ವಿಸ್ತೃತ ಪಾಠ ವಿಮರ್ಶೆಯಲ್ಲಿ ಪ್ರಶಿಕ್ಷಣಾರ್ಥಿಗಳಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ನೀಡಿ ಅವರಲ್ಲಿ ತಮ್ಮ ಪಾಠ ಬೋಧನೆಯ ನಂತರ ತಮ್ಮ ಬೋಧನೆಯನ್ನು ಸ್ವವಿಮರ್ಶೆಗೆ ಒಳಪಡಿಸುವ ಸಾಮರ್ಥ್ಯವನ್ನು ಬೆಳಸುವ ಮೂಲಕ ನಿಕಟ ಸೇವಾಪೂರ್ವ ತರಬೇತಿಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬಹುದಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- Chakrabarty D. (2016). Implementation of internship in two year B.Ed. course- A challenge or Routine Task. *IRA International journal of education and multidisciplinary studies*, 3 (3).p18
- Kumar A. (2016). Attitude of pupil teachers towards internship as a part of B.Ed. curriculum in relation to Gender, stream and academic qualification. *International journal of Engineering science and Computing.* 6(7).
- *National curriculum framework for teacher education.* (2010). National Curriculum Framework for Teacher Education.
- *School internship: Framework and Guidelines*. (2016). National council for teacher education.